ನಾನು ನಿಂತಲ್ಲಿಗೆ ಬಂದವಳೇ, 'ಮೂರು ದಿನ ನಿನ್ನನ್ನ ಹುಡುಕ್ಕಂಡು ಬಂದೆ ನೋಡು... ನೀನು ಸಿಕ್ಕಲಿಲ್ಲ... ಈವತ್ತು ಸಿಕ್ಕಿದೆ... ನೀನು ಸಿಕ್ಕೇ ಸಿಕ್ತೀಯಾ ಅಂತ ನಂಗೆ ಗೊತ್ತಿತ್ತು...' ಎಂದು ಜೋರಾಗಿ ನಕ್ಕಳು. ಅವಳ ಬಾಯಿಯಿಂದ ಮದ್ಯದ ದುರ್ವಾಸನೆ ಗಪ್ಪನೆ ಮೂಗಿಗೆ ಬಡಿಯಿತು. ನಾನು ಏನು ಹೇಳಬೇಕೆಂದು ತಿಳಿಯದೆ ಅತ್ತ ಮುಖ ತಿರುಗಿಸಿ ನಿಂತೆ.

'ಕೆಲ್ಸ ಮುಗೀತಾ... ನಡಿ ಹೋಟ್ಲಿಗೆ ಹೋಗೋಣ... ಬಿರಿಯಾನಿ ತಿನ್ನೋಣ...' ಎಂದಳು. ಪಕ್ಕದಲ್ಲಿಯೇ ನಾನು ಕೆಲಸ ಮಾಡುವ ಕಾರ್ಖಾನೆಯಿದೆ... ಯಾರಾದರೂ ನೋಡಿ ಏನಾದರೂ ಅಂದುಕೊಂಡಾರು ಎಂದು ನನಗೆ ಸಣ್ಣಗೆ ಹೆದರಿಕೆ ಶುರುವಾಗಿ, 'ಇನ್ನೂ ಫ್ಯಾಕ್ಟರಿ ಕೆಲ್ಸ ಮುಗಿದಿಲ್ಲಾ...' ಎಂದು ಕ್ಷೀಣದನಿಯಲ್ಲಿ ಸುಳ್ಳು ಹೇಳಿದೆ.

'ಎಂತಾ ಕೈ ರಾಜಾ ನಿಂದು... ಆವತ್ತು ನೀನು ದುಡ್ಡು ಕೊಟ್ಟಾಗಿನಿಂದ ದಿನಾ ಎರಡು ಮೂರು ಗಿರಾಕಿ ಸಿಕ್ತಾ ಇದಾರೆ... ನಾನು ಖುಷಿಯಾಗಿದೀನಿ... ತಗೋ... ನೀನು ಆವತ್ತು ಕೊಟ್ಟ ಇನ್ನೂರು ರೂಪಾಯಿ...' ಎಂದು ವ್ಯಾನಿಟಿ ಬ್ಯಾಗಿನೊಳಗೆ ಕೈ ಹಾಕಿ ನೂರರ ಎರಡು ನೋಟು ನೀಡಿದಾಗ ನನಗೆ ತಿಳಿಯದಂತೆ ನನ್ನ ಕಣ್ಣುಗಳು ಒದ್ದೆಯಾದವು.

'ಹೇ ಏನೂ ಬೇಡಾ... ಪರವಾಗಿಲ್ಲ... ನೀನೇ ಇಟ್ಕೋ...' ಎಂದು ಗದ್ಗದಿತನಾಗಿ ನುಡಿದು ಅವಳ ಕೈಯ್ಯನ್ನು ಅತ್ತ ಸರಿಸಿದೆ.

'ಅಯ್ಯೋ... ದುಡ್ಡು ನಿನಗೇನು ಪುಕ್ಸಟ್ಟೆ ಬರ್ತದಾ... ನೀನೂ ಕಷ್ಟಪಟ್ಟು ದುಡೀಲೇಬೇಕಲ್ವಾ... ತಗೋ ಇಟ್ಕೋ...' ಎಂದು ಹೇಳಿ ಅವಳು ನೂರರ ಎರಡು ನೋಟುಗಳನ್ನು ನನ್ನ ಶರಟಿನ ಜೇಬಿಗೆ ತುರುಕಿದಾಗ ನನ್ನ ಬಾಯಿಯಿಂದ ಮಾತೇ ಹೊರಡದೇ ಹೃದಯ ಭಾರವಾಯಿತು.

'ನಿನ್ನ ಕೆಲ್ಸಕ್ಕೆ ಲೇಟಾಯ್ತದೇನೋ... ನಡೀ... ನಾನು ಬರ್ತೀನಿ ರಾಜಾ... ಇನ್ನ್ಯಾವಾಗಲಾದರೂ ಸಿಕ್ತೀನಿ...' ಎಂದು ಅವಳು ನನ್ನ ಕೆನ್ನೆ ಹಿಂಡಿ, ಕೈ ಬೀಸಿ ಹೊರಟಳು. ಅವಳು ಹೋದ ದಾರಿಯನ್ನೇ ದಿಟ್ಟಿಸಿ ನೋಡಿದೆ.

## ಟಿ. ತಿಮ್ಮಪ್ಪ

ಕತೆಗಾರರು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕಿನ ತಿಪ್ಪೂರು ಗ್ರಾಮದವರು. ಮೈಸೂರು ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ಪದವೀಧರರಾಗಿರುವ ಅವರು ಪ್ರಸ್ತುತ ತುಮಕೂರಿನ ಸರ್ಕಾರಿ ಪಾಲಿಟೆಕ್ನಿಕ್‌ನ ಆಯ್ಕೆ ಶ್ರೇಣಿ ಉಪನ್ಯಾಸಕರು. ಅವರ ಇಪ್ಪತ್ತಕ್ಕೂ ಕಿರುಗತೆ, ಸಣ್ಣಕತೆ, ನೀಳ್ಗತೆಗಳು 'ಸುಧಾ', 'ಮಯೂರ' ಮತ್ತಿತರ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಅವರ ಕಾದಂಬರಿಗಳು – 'ಜಂಬೂಕ', 'ಯಶೋದಾ'.